ಸೂಲದಪಟ್ಟಿ.

ನಂಬರ್.	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಲಗು.	ಯಾವಾಗ ದೇಣಿ ಕೊಡಬದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿವಿನ್ ಯೀ ನಾದರೂ ಇದ್ದರೆ.	ಷರಾ.
1	ಮೈಸೂರು ಮುಂಡಿಮೊಹಲ್ಲೇಲಿರುವ ಮಹಂಮದ್ ಬೀತುರಿ ತಂದೆ ಗುಲಾಂ ಮುಲ್ಕ್.	135–5–0	..	ಡಿಕ್ರಿ ಬಾಬತು.	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಫ್ರೆಂಚ್‌ರಾಕ್ಸ್ ಸಬ್ ಡಿವೀಜ್ಞ್.

ತಾರೀಖು 8ನೇ ಜನವರೀ 1887.

ಫ್ರೆಂಚ್‌ರಾಕ್ಸ್ ಸಬ್ ಡಿವೀಜ್ಞ್ ಅತ್ತಿಕುಪ್ಪ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಈ ಕೆಳಗೆ ನಮೂದಿಸುವ ದಸ್ತಾವೇಜನ್ನು ಕ್ರಮವಾದ ವಾರಸ್ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುಕ್ತಾರೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ಒಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷ್ಯನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ರೆಜಿಸ್ಟ್ರೇಷ್ಯನ್ ನಂಬರ್.	ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಸಲ್ಲಿಸಿದ ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿ ಆದ ತಾರೀಖು.	ಷರಾ—ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1884—85ನೇ ಇಸವಿ ಬಾಬತು ನಂಬರ್ 336	ಸಂತೆಬಾಚಹಳ್ಳಿಲ್ಲಿ ವಾಸವಾಗಿದ್ದು ಹಾಲೀ ಹಾಸನದಲ್ಲಿ ನಿತ್ಯಾತ್ರೆಯಿಂದ ಜೀವನ ಮಾಡಿಕೊಂಡು ಯಿರುವ 42 ವಯಸ್ಸುವುಳ್ಳ ಸ್ಮಾರ್ತ ಬ್ರಾಹ್ಮಣ ಜಾತಿ ಸಂಕಣ್ಣಯ್ಯನ ಹೆಂಡತಿ ಭಾಗೀರತಮ್ಮ.	ಸಂತೆಬಾಚಹಳ್ಳೀಯಲ್ಲಿ ಇರುವ ಸ್ಮಾರ್ತ ಬ್ರಾಹ್ಮಣ ಅಣ್ಣಾಜಿರಾಯರ ರಾಮಯ್ಯನವರ ಮಗ 29 ವಯಸ್ಸುವುಳ್ಳವ್ಯವಸಾಯದಿಂದಜೀವನ ಮಾಡುವ ಕೃಷ್ಣಪ್ಪ.	1—11—84	15—11—84	24—11—84	ಸಂತೆಬಾಚಹಳ್ಳಿ ಗ್ರಾಮದಲ್ಲಿ ಪ್ರವತಿಯಾದ ನನ್ನ ಗಂಡನ ಹಿಸ್ಸೆಗೆ ಬಂದು ಈಗ ಪಾಳುಬಿದ್ದು ಇರುವ ಮನೆ ಚೌತರ್ಫ-ಪೂರ್ವಕ್ಕೆ ನನ್ನ ಮೈದುನ ಶ್ರೀಕಂಠಯ್ಯನ ಮನೆ ಮತ್ತು ಅವನ ಹಿತ್ತಲು-ಪಶ್ಚಿಮ ನನ್ನ ಭಾವ ನಂಜಪ್ಪಯ್ಯ ವುರಫ್ ಅಂಕೈಯನ ಮನೆ ಮತ್ತು ಅವರ ಹಿತ್ತಲು-ವುತ್ತರಕ್ಕೆ ಬಳಿಕ ಜನ್ನ ವೀರಕಪ್ಪ ಹಿತ್ತಲು-ದಕ್ಷಿಣಕ್ಕೆ ದೊಡ್ಡಬೀದಿ ಈ ಮಧ್ಯೆ ಇರುವ 13 ಅಂಕಣ ಕಿಕಸ್ತು ಮೂರು ಅಂಕಣ ಕಟ್ಟು ದಾಯೆ ಇವಕ್ಕೆ ಶೇರಿದ ಹಿತ್ತಲೂ ಪಾಳು ನಿವೇಶನ ಅದರಲ್ಲಿ ಇರುವ ಫಲಾ ತೆಂಗಿನಮರ, ಇದರಲ್ಲಿ ಇರುವ ತೊಲೆಗಳು ಹಂಚು ಸಹಾ ನಿನಗೆ ಗವರ್ಮೆಂಟ್ 48 ರೂಪಾಯಿಗೆ ಖರೀದಿಗೆ ಕೊಟ್ಟು ಮೊಬಲಗು ತೆಗದುಕೊಂಡು ಯಿರುತ್ತೇನೆಂದು.

ಬಿ. ಕೆ. ವೆಂಕಟವರದಯ್ಯಂಗಾರ್,
ರಿಜಿಸ್ಟ್ರಾರ್.